

# ಭವಿಷ್ಯವೆಂಬ ಭೂತ!

**ಗಮನಿಸಬೇಕಾದ ಅಂಶವೆಂದರೆ, ನಮ್ಮ ಕೆಲಸ ಬದಲಾದರೆ ಕೈಯಲ್ಲಿನ ರೇಖೆಗಳೂ ಬದಲಾಗುತ್ತವೆ.**

**ಮುಂದೇನು?** ಇದೊಂದೇ ಪ್ರಶ್ನೆ ಹಲವಾರು ಮೌಢ್ಯಗಳ ತಾಯಿಯಾಗಿದೆ! ಅನೂಹ್ಯವಾದ ಭವಿಷ್ಯವನ್ನು ತಿಳಿಯಲು ನಾವು ಹಲವಾರು ವಿಧಿ, ವಿಧಾನಗಳ ಮೊರೆ ಹೋಗುತ್ತೇವೆ. ಅವುಗಳಲ್ಲಿ ಕೆಲವನ್ನು ವಿಶ್ಲೇಷಿಸೋಣ.

ಹಸ್ತಸಾಮುದ್ರಿಕ: ಇದು ಕೈ ನೋಡಿ ಹೇಳುವ ಶಾಸ್ತ್ರ. ಅಂಗೈನ ರೇಖೆಗಳ ಆಧಾರದ ಮೇಲೆ ಮನುಷ್ಯನ ಜೀವನ ನಿಂತಿದೆ ಎಂಬ ಒಂದು ಕಲ್ಪನೆ.

ಮಗು ಹುಟ್ಟಿದಾರಭ್ಯ ತನ್ನ ಕೈಗಳನ್ನು ಮಡಚಿಕೊಳ್ಳುತ್ತದೆ. ಹಾಗೆ ನಾವು ಯಾವುದೇ ಭಾಗವನ್ನು ಮಡಿಸಿಕೊಂಡಾಗ ಇಂತಹ ರೇಖೆಗಳು ಕಾಣುವುದು ಸಹಜ. ಮುಂಗೈ, ಹಿಂಗಾಲು, ಕಣ್ಣಿನ ರೆಪ್ಪೆಗಳ ಕೆಳಭಾಗ, ಮೊಣಕಾಲು, ಮೊಣಕೈಗಳನ್ನು ಮಡಿಸುವ ಕೀಲುಗಳು, ಅಷ್ಟೇ ಅಲ್ಲದೆ ದಪ್ಪಗಿರುವವರು ಸಣ್ಣವಾದಾಗ ಬೀಳುವ stretch mark ಗಳು, ಎಲ್ಲವೂ ಮಡಿಸುವಿಕೆಯಿಂದಲೇ ಆಗುವಂತಹುವಾದರೂ ಅಂಗೈನ ರೇಖೆಗಳ ಬಗ್ಗೆ ಮೂಡಿರುವ ನಂಬಿಕೆ, ಕುತೂಹಲಗಳು ಬೇರೆ ರೇಖೆಗಳ ಬಗ್ಗೆ ಮೂಡದಿರುವುದು ಅವುಗಳ ದೌರ್ಭಾಗ್ಯವೇ ಸೈ!

ಗಮನಿಸಬೇಕಾದ ಅಂಶವೆಂದರೆ, ನಮ್ಮ ಕೆಲಸ ಬದಲಾದರೆ ಕೈಯಲ್ಲಿನ ರೇಖೆಗಳೂ ಬದಲಾಗುತ್ತವೆ. ಮೋಟಾರ್ ಬೈಕ್ ಓಡಿಸುವಾಗಿನ ಮಡಕೆಗಳಿಗೆ ಅನುಗುಣವಾಗಿ ಇರುವ ರೇಖೆಗಳು ಕಾರು ಕೊಂಡ ನಂತರ (ಅಥವಾ ಕಾರು ಡ್ರೈವರ್ ಆಗಿ ಕೆಲಸ ಮಾಡಲು ಆರಂಭಿಸಿದ ನಂತರ) ಬದಲಾಗುತ್ತವೆ; ಹಳ್ಳಿಯ ರೈತ ಹೊಲ ಮಾರಿಕೊಂಡು ನಗರಕ್ಕೆ ಬಂದರೆ, ನೇಗಿಲು ಹಿಡಿದ ರೇಖೆಗಳು ಬದಲಾಗಿ ಬೇರೆ ರೇಖೆಗಳು ಮೂಡುತ್ತವೆ. ಹಾಗೆಂದ ಮಾತ್ರಕ್ಕೆ ಅವನ ಭವಿಷ್ಯ ಬದಲಾಯಿತು ಎಂದಲ್ಲ; ಬಂದ ಹಣ, ಸಂದರ್ಭ ಸಮಯವನ್ನು ಸರಿಯಾಗಿ ಬಳಸದಿದ್ದರೆ ಯಾರ ಭವಿಷ್ಯವೂ ಚೆನ್ನಾಗಿರುವುದಿಲ್ಲ ಎಂಬುದು ಸತ್ಯಸ್ಯ ಸತ್ಯ.



ಹಾಗಿದ್ದರೆ ಕೆಲವರು ಹೇಳಿದ ಭವಿಷ್ಯ ನಿಜವಾಗುತ್ತದಲ್ಲಾ ಎಂದು ಮೂಗಿನ ಮೇಲೆ ಬೆರಳೇರಿತೇನು?



ಇದು ಜಾತಕದ ರೀತ್ಯಾ ಶಾಸ್ತ್ರ ಹೇಳುವ ರೀತಿಯದ್ದೇ!

ಹಿಂದೊಮ್ಮೆ ಋಷಿಗಳೊಬ್ಬರು ಐದು ಸಾವಿರ ಜಾತಕಗಳನ್ನು ತರಿಸಿ, ಅವುಗಳನ್ನು ಸುದೀರ್ಘವಾಗಿ ಅಧ್ಯಯನ ಮಾಡಿ, ಇಂತಿಂತಹ ಜಾತಕಗಳ ವ್ಯಕ್ತಿಗಳನ್ನು ಇಂತಿಂತಹ ರೀತಿಯಲ್ಲಿ ವರ್ತಿಸುತ್ತಾರೆ ಎಂದು ಈಗಿನ ಸಮೀಕ್ಷಾ ವರದಿಗಳೋಪಾದಿಯಲ್ಲಿ ಒಂದು ವರದಿ ಸಿದ್ಧ ಮಾಡಿದರು. ಅದು ಮುಂದಿನ ಎಲ್ಲಾ ಜಾತಕಪಕ್ಷಿಗಳಿಗೆ ಆಧಾರ, ಮಾರ್ಗದರ್ಶಿ ಆಯಿತು. ಆದರೆ ಅದರ ಸತ್ಯಾಸತ್ಯತೆ ಈಗ ಎಲ್ಲರಿಗೂ ತಿಳಿದಿರುವುದೇ. ಒಂದು ರೈಲ್ವೇ ಅಪಘಾತವಾದರೆ, ಒಂದು ವಿಮಾನ ಕೆಳಗೆ ಬಿದ್ದರೆ, ಅದರಲ್ಲಿ ಎಲ್ಲಾ ಜಾತಕಗಳ, ಎಲ್ಲಾ ವಿಧದ ಜನರೂ ಸಾವನ್ನಪ್ಪುತ್ತಾರೆ. ಇವರೆಲ್ಲರ ಭವಿಷ್ಯವನ್ನು ಪೈಲಟ್‌ನ ಸಾಮುದ್ರಿಕ ಭವಿಷ್ಯಕ್ಕೆ ತಾಳೆ ಹಾಕಿ ನೋಡಬೇಕಿತ್ತೇನೋ!

ಅಂತೆಯೇ ಕೈನ ರೇಖೆಗಳನ್ನು ಆಧರಿಸಿದ ಶಾಸ್ತ್ರವೂ ಹೆಚ್ಚೆಂದರೆ ಟೈಪ್ ಕ್ಯಾಸ್ಟಿಂಗ್ ಅಷ್ಟೇ ಹೊರತು ಕರಾರುವಾಕ್ಕೇನಲ್ಲ. ನಾಯಿ ಬೊಗಳುತ್ತದೆ, ಮಂತ್ರಿ ಸುಳ್ಳು ಹೇಳುತ್ತಾನೆ ಇವೆಲ್ಲವೂ ಟೈಪ್ ಕ್ಯಾಸ್ಟಿಂಗ್ (ಮಾದರಿಗೆ ಬದ್ಧವಾದವು) ಗಳ ಉದಾಹರಣೆಗಳು. ಆದರೆ ಯಾವ ಭವಿಷ್ಯಕಾರನೂ ನಾಯಿ ಯಾವ ಸ್ವರದಲ್ಲಿ, ಎಷ್ಟು ಹೊತ್ತು ಬೊಗಳುತ್ತದೆ ಮತ್ತು ಮಂತ್ರಿ ಎಷ್ಟು ಬಾರಿ ಸುಳ್ಳು ಹೇಳುತ್ತಾನೆ ಎಂದು ಹೇಳುವುದು ಸಾಧ್ಯವಿಲ್ಲ. ಏಕೆಂದರೆ ಇವುಗಳು ಒಂದು ಮಾದರಿಗೆ ಒಳಪಟ್ಟಿಲ್ಲ. ನಮ್ಮಲ್ಲಿ ಹೇಳಲ್ಪಟ್ಟ ಶಾಸ್ತ್ರ ಸುಳ್ಳಾದಾಗ ಆ ಭವಿಷ್ಯ ನುಡಿದವನನ್ನು ಸಣ್ಣದಾಗಿ ಹಳಿದು, ನಮ್ಮ ಅದೃಷ್ಟವನ್ನೇ ಜರೆದುಕೊಂಡು, ನಂತರ ಇನ್ನಾವನೋ ಹೇಳಿದ ಶಾಸ್ತ್ರ ನಿಜವಾದಾಗ ಅದಕ್ಕೆ ಬಣ್ಣ ಕಟ್ಟಿ ಪ್ರಚಾರ ಮಾಡುವುದು ನಡೆದು ಬಂದಿರುವ ರೀತಿ. ಹೀಗಾಗಿ ಭವಿಷ್ಯ ನುಡಿಯುವವರ ಭವಿಷ್ಯವನ್ನು ನಾವು ಉಜ್ವಲಗೊಳಿಸುತ್ತಿದ್ದೇವಷ್ಟೆ.

ಗಿಣಿಶಾಸ್ತ್ರ: ಪಂಜರದಿಂದ ಗಿಳಿಯನ್ನು ಹೊರತೆಗೆದು ಎಲ್ಲಾ ಕಾರ್ಡುಗಳನ್ನು ಹರಡಿ, ಗಿಣಿ ಎತ್ತಿಕೊಟ್ಟ ಕಾರ್ಡನ್ನು ನಿಮಗೆ ಓದಲು ಗಿಣಿಶಾಸ್ತ್ರದವನು ಕೊಡುತ್ತಾನೆ. ಅದು ನೀವು ಕೇಳಿದ ಪ್ರಶ್ನೆಗೆ ಉತ್ತರವಾಗಿರುತ್ತದೆ. ಅದು ಗಿಣಿಯೇ ಆರಿಸಿಕೊಟ್ಟ ಕಾರ್ಡ್ ಎಂದು ನಾವು ಮೂಕವಿಸ್ಮಿತರಾಗುತ್ತೇವೆ.

ವಾಸ್ತವವಾಗಿ ನಿಮ್ಮ ಪ್ರಶ್ನೆಯನ್ನು ಕೇಳಿದ ನಂತರ ಆ ಶಾಸ್ತ್ರದವನು ಹರಡುವ ಕಾರ್ಡುಗಳಲ್ಲಿ ನಿಮ್ಮ ಪ್ರಶ್ನೆಗೆ ಹತ್ತಿರದ, ನಿಮ್ಮ ಮನಸ್ಸಿಗೆ ಹಿಡಿಸುವ ಉತ್ತರ ಯಾವ ಕಾರ್ಡಿನಲ್ಲಿ ಇರುತ್ತದೆಂದು ತಿಳಿದಿರುತ್ತದೆ. ಪಂಜರದಿಂದ ಹೊರಬಂದ ಗಿಳಿಗೆ ಆತನು ನಿಧಾನವಾಗಿ ಕೈಯನ್ನು ಹಿಂದಿನಿಂದ ಮುಂದಕ್ಕೆ ಆಡಿಸುವುದರ ಮೂಲಕ ಯಾವ ಕಾರ್ಡನ್ನು ಹೆಕ್ಕಬೇಕೆಂದು ಸೂಚನೆ ನೀಡುತ್ತಾನೆ. ಆದರೆ ಆ ಸೂಚನೆ ಸೂಚನೆಯೆಂದು ತಿಳಿಯದಂತೆ ನಮ್ಮನ್ನು ಮಾತಿನಲ್ಲಿ ತೊಡಗಿಸಿಕೊಂಡಿರುತ್ತಾನೆ. ಇದರಲ್ಲಿ ಗಿಣಿಯ ಪಾತ್ರ ಏನೇನೂ ಇಲ್ಲ.

ಗಿಣಿಶಾಸ್ತ್ರದವನು ಕೈ ಆಡಿಸದೆ, ಸನ್ನೆ ಮಾಡದೆ, ಗಿಣಿ ಕಾರ್ಡನ್ನು ಎತ್ತುವುದೇ ಇಲ್ಲ. ಕೈಯಾಡಿಸದೆ, ಕೈ ಕಟ್ಟಿಕೊಂಡು ಕುಳಿತುಕೊ. ಗಿಣಿ ಕಾರ್ಡು ನೀಡಲಿ ಎಂದು ಹೇಳಿ, ಆ ಗಿಣಿಶಾಸ್ತ್ರಜ್ಞ ನಿಮ್ಮ ರಸ್ತೆಗೆ ಮತ್ತೆಂದೂ ಸುಳಿಯುವುದಿಲ್ಲ!

■ ವೈ-ಚಾರಿ